# <u>ಪ್ರಕಟಣೆ</u>

2020-21ನೇ ಸಾಲಿನ ಬಿ.ಇಡಿ ದಾಖಲಾತಿಗೆ ಸಂಬಂಧಿಸಿದಂತೆ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳನ್ನು ಭರ್ತಿ ಮಾಡುವ ಸಂಬಂಧ ಕಲಾ ವಿಭಾಗದ ಅಭ್ಯರ್ಥಿಗಳು ಕಾಲೇಜುಗಳ ಆಯ್ಕೆಗಳನ್ನು ದಾಖಲಿಸಿರುವುದನ್ನು ಪರಿಗಣಿಸಿ ಅಂತಿಮ ಸುತ್ತಿನ ಸೀಟು ಹಂಚಿಕೆ ಪಟ್ಟಿಯನ್ನು ದಿನಾಂಕ: 23-04-2021ರಂದು ಇಲಾಖಾ ವೈಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳು ಹಂಚಿಕೆಯಾದ ಕಾಲೇಜಿಗೆ ನಿಯಮಾನುಸಾರ ನಿಗದಿತ ದಾಖಲಾತಿ ಶುಲ್ಕವನ್ನು ತಮ್ಮ Username ಮತ್ತು Password ಅನ್ನು ನಮೂದಿಸುವುದರೊಂದಿಗೆ Login ಆಗಿ ಆನ್ ಲೈನ್ ಮೂಲಕ **(ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ಯು.ಪಿ.ಐ)** ಪಾವತಿಸುವುದು. ಶುಲ್ಕ ಪಾವತಿಸಿದ ನಂತರವೇ ದಾಖಲಾತಿ ಪತ್ರ Generate ಆಗುವುದರಿಂದ ಶುಲ್ಕ ಪಾವತಿಸಿ ಪರಿಶೀಲನಾ ಕೇಂದ್ರಕ್ಕೆ ತೆರಳುವುದು. ಪರಿಶೀಲನಾ ಕೇಂದ್ರದ ಮೂಲಕ ಕಾಲೇಜಿಗೆ ದಾಖಲಾಗಲು **<u>ದಿನಾಂಕ:23-04-2021 ರಿಂದ 28-04-2021</u>** ರವರೆಗೆ ಅವಕಾಶವಿರುತ್ತದೆ.

ಅಭ್ಯರ್ಥಿಯು ದಾಖಲಾತಿ ಶುಲ್ಕ ಪಾವತಿಸಿದ ನಂತರ ತಮಗೆ ಅನ್ವಯವಾಗುವ ಮೂಲ ದಾಖಲೆಗಳನ್ನು ಅನುಬಂಧ-6ರ ನಮೂನೆಯಲ್ಲಿರುವಂತೆ ಕ್ರಮವಾಗಿ ಜೋಡಿಸಿಕೊಂಡು ಸಂಬಂಧಪಟ್ಟ ಜಿಲ್ಲಾ ನೋಡಲ್ ಕೇಂದ್ರಗಳಿಗೆ ಹಾಜರಾಗುವುದು. ನೋಡಲ್ ಕೇಂದ್ರದಲ್ಲಿ ಅಧಿಕಾರಿಗಳು ಅಭ್ಯರ್ಥಿಯು ನಿಯಮಾನುಸಾರ ಶುಲ್ಕ ಪಾವತಿಸಿರುವ ಬಗ್ಗೆ ಹಾಗೂ ಮೂಲ ದಾಖಲೆಗಳನ್ನು ಹೊಂದಿರುವ ಬಗ್ಗೆ ಖಚಿತಪಡಿಸಿಕೊಂಡು ದಾಖಲಾತಿ ಪತ್ರವನ್ನು ವಿತರಿಸುವರು.

**ಸೂಚನೆ:**

1. **ನಿಗದಿತ ದಿನಾಂಕದೊಳಗೆ ಶುಲ್ಕ ಪಾವತಿಸದ ಹಾಗೂ ಪಾವತಿಸಿ ನೋಡಲ್ ಕೇಂದ್ರದ ಮೂಲಕ ಕಾಲೇಜಿಗೆ ದಾಖಲು ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳ ಸೀಟು ರದ್ದಾಗುವುದು.**
2. **2020-21ನೇ ಸಾಲಿನ ಬಿ.ಇಡಿ ದಾಖಲಾತಿ ಸಂಬಂಧ ಸೀಟು ಹಂಚಿಕೆಯ ಕೊನೆಯ ಸುತ್ತಾಗಿರುತ್ತದೆ.**
3. **ಪ.ಜಾತಿ/ ಪ.ಪಂಗಡ ಕ್ಕೆ ಸೇರಿದ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಆದಾಯ ಪ್ರಮಾಣ ಪತ್ರದಲ್ಲಿ ರೂ. 2,50,000/- ರ ಒಳಗಿನ ಆದಾಯ ಮಿತಿಯನ್ನು ಹೊಂದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು). ದಾಖಲಾತಿ ಪತ್ರ ಪಡೆಯುವ ಸಂದರ್ಭದಲ್ಲಿ ನೋಡಲ್ ಅಧಿಕಾರಿಗೆ ದಾಖಲಾತಿಗೆ ಸಂಬಂಧಪಟ್ಟ ಮೂಲ ದಾಖಲೆಗಳೊಂದಿಗೆ ಈ ಪ್ರಮಾಣ ಪತ್ರವನ್ನು ಒದಗಿಸುವುದು ಕಡ್ಡಾಯ. ಒಂದು ವೇಳೆ ಆದಾಯ ಮಿತಿ ರೂ. 2,50,000/-ಗಳಿಗಿಂತ ಅಧಿಕವಿರುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸುವುದು ಕಡ್ಡಾಯ.**

ಸಹಿ/-

ವಿಶೇಷಾಧಿಕಾರಿ

ಕೇಂದ್ರೀಕೃತ ದಾಖಲಾತಿ